ಬೇಕೆನಿಸಿತ್ತು. ಹೀಗಾಗಿ ಸದಾಶಿವ ನೀನಾಸಂ ಅವರ ಬಳಿ ಅಭಿನಯ ತರಬೇತಿ ಪಡೆದೆ. ಆನಂತರ ನನಗೆ ಆತ್ಮವಿಶ್ವಾಸ ಬಂತು. ಅದಾದ ಮೇಲೆ ವರ್ಕ್‌ಶಾಪ್‌ನಲ್ಲಿ ತೊಡಗಿಕೊಂಡೆ. ಇವೆಲ್ಲವೂ ನನ್ನಲ್ಲಿ ಧೈರ್ಯ ತುಂಬಿದವು. ಕ್ರೀಡೆಯಲ್ಲೂ ಮುಂದಿದ್ದೆ. ಕಬಡ್ಡಿ ಹಾಗೂ ರೋಲ್‌ಬಾಲ್‌ನಲ್ಲಿ ದಕ್ಷಿಣ ನ್ಯಾಷನಲ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಕರ್ನಾಟಕ ಪ್ರತಿನಿಧಿಸಿದ್ದೆ. ನನ್ನನ್ನು ಸಿನಿಮಾದಲ್ಲಿ ತೊಡಗಿಸಿಕೊಳ್ಳಲು ಇವೆಲ್ಲವೂ ಪರೋಕ್ಷವಾಗಿ ಪ್ರೇರಣೆ ನೀಡಿವೆ.

◆ **ಮೊದಲ ಸಿನಿಮಾ ಕೊಟ್ಟ ಅನುಭವ?**

ಸಾವಿರಾರು ಮಂದಿ ಸಿನಿಮಾರಂಗಕ್ಕೆ ಬರಬೇಕೆಂದು ಪ್ರಯತ್ನಿಸುತ್ತಿರುತ್ತಾರೆ. ಮೊದಲ ಪ್ರಯತ್ನದಲ್ಲಿಯೇ ಪಾತ್ರಪೋಷಣೆಗೆ ಅವಕಾಶ ನೀಡುವಂಥ ಪಾತ್ರ ಸಿಕ್ಕಿದ್ದು ನನ್ನ ಅದೃಷ್ಟ ಎನ್ನಿಸುತ್ತದೆ. ಅದೃಷ್ಟಕ್ಕೆ ತಕ್ಕಂತೆ ಶ್ರಮವನ್ನೂ ಹಾಕಿದ್ದೇನೆ. ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡಿದ್ದೇನೆ ಎಂಬ ವಿಶ್ವಾಸ ನನಗಿದೆ. ತಂಡದ ಬೆಂಬಲವನ್ನೂ ಮರೆಯುವಂತಿಲ್ಲ.

◆ **ಸಿನಿಮಾರಂಗಕ್ಕೆ ಹೊಸದಾಗಿ ಬಂದವರಿಗೆ ತಮ್ಮದೊಂದು ಐಡೆಂಟಿಟಿ ರೂಪಿಸಿಕೊಳ್ಳುವ ಅವಸರವಿರುತ್ತದೆ. ನಿಮ್ಮ ಪ್ರಕಾರ 'ಗುರುತಿಸಿಕೊಳ್ಳುವುದು' ಎಂದರೆ ಏನು?**

ಹಿಂದೆ, ಗುರುತಿಸಿಕೊಳ್ಳುವುದು ಎನ್ನುವುದಕ್ಕೆ ಬೇರೆಯದೇ ವ್ಯಾಖ್ಯಾನವಿತ್ತು. ಜೊತೆಗೆ ಸಿನಿಮಾ ನಟಿ ಬಗ್ಗೆ ಕಲ್ಪನೆಗಳೂ ಬೇರೆ ರೀತಿಯಿದ್ದವು. ಹೀರೊಯಿನ್ ತುಂಬಾ ಗ್ಲಾಮರಸ್ ಆಗಿರಬೇಕು, ಮಾಡೆಲ್ ರೀತಿ ಫಿಟ್‌ನೆಸ್ ಇರಬೇಕು ಎಂದು. ಈಗ ಆ ಪರಿಕಲ್ಪನೆ ಸ್ವಲ್ಪ ಬದಲಾದಂತಿದೆ. ಗ್ಲಾಮರ್ ಹೊರತಾಗಿಯೂ ನಟಿಯರ ಪಾತ್ರಗಳು ರೂಪುಗೊಳ್ಳುತ್ತಿವೆ. ಕಥೆ ಮುನ್ನೆಲೆಗೆ ಬಂದಿದೆ. ಪಾತ್ರಕ್ಕೆ ಯಾರು ತುಂಬಾ ಚೆನ್ನಾಗಿ ಒಪ್ಪುತ್ತಾರೆ, ಪಾತ್ರಕ್ಕೆ ಅವರು ಹೇಗೆ ಕನೆಕ್ಟ್ ಆಗಬಲ್ಲರು ಎಂಬುದನ್ನು ನೋಡಿ ನಟಿಯರ ಆಯ್ಕೆ ಮಾಡುತ್ತಾರೆ. ಇಂಥ ಪಾತ್ರಗಳಿಂದ ಸಿಗುವ ಐಡೆಂಟಿಟಿಯನ್ನು, ಮನ್ನಣೆಯನ್ನು ನಾನು ಇಷ್ಟಪಡುತ್ತೇನೆ.

◆ **ಎಂಥ ಸಿನಿಮಾ ಕಥೆಗಳು ನಿಮ್ಮನ್ನು ಹೆಚ್ಚು ಸೆಳೆಯುತ್ತವೆ?**

ನನಗೆ 'ಲೈಫ್ ರಿಯಾಲಿಟಿ' ಕಥೆಗಳ ಸಿನಿಮಾಗಳು ಇಷ್ಟ. ಅಂಥ ವಾಸ್ತವಿಕ ನೆಲೆಗಟ್ಟಿನ ಸಿನಿಮಾಗಳಲ್ಲಿ ನಟಿಸಬೇಕೆಂಬುದು ನನ್ನ ಬಹುದೊಡ್ಡ ಆಸೆ. 'ಮುಂದಿನ ನಿಲ್ದಾಣ', 'ಸಪ್ತಸಾಗರದಾಚೆ ಎಲ್ಲೊ' ಸಿನಿಮಾದಲ್ಲಿನ ನಟಿಯರ ಪಾತ್ರಗಳು ನನ್ನನ್ನು ತುಂಬಾ ಸೆಳೆದಿವೆ. ಅಂಥ ಪಾತ್ರಗಳು ಸಿಗುವುದೇ ಅದೃಷ್ಟ.

◆ **ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಿನಿಮಾರಂಗದಲ್ಲಿ ಛಾಪು ಮೂಡಿಸುವುದು ಎಷ್ಟು ಸವಾಲು?**

ಬೇರೆ ಬೇರೆ ರೀತಿಯ ಪಾತ್ರಗಳನ್ನು ಮಾಡಿ ನಮ್ಮದೊಂದು 'ಐಡೆಂಟಿಟಿ' ಸೃಷ್ಟಿಸಿಕೊಳ್ಳಲು ಅವಕಾಶ ಸಿಗುವುದೇ ಸವಾಲು. ಕಮರ್ಷಿಯಲ್–ಕಂಟೆಂಟ್ ಯಾವುದೇ ಪ್ರಕಾರದ ಸಿನಿಮಾ ಆದರೂ ಜನರಿಗೆ ರೀಚ್ ಆಗುವುದೇ ಸವಾಲು.

◆ **ನಿಮ್ಮ ಮುಂದಿನ ಯೋಜನೆಗಳು?**

ಸದ್ಯ 'ಕೆರೆಬೇಟೆ' ಸಿನಿಮಾ ಮಾರ್ಚ್ 15ಕ್ಕೆ ಬಿಡುಗಡೆ ಆಗುತ್ತಿದೆ. ಮತ್ತೊಂದು ಸಿನಿಮಾ ಮಾತುಕತೆ ನಡೆಯುತ್ತಿದೆ. ನನ್ನ ಇವೆಂಟ್ ಮ್ಯಾನೇಜ್‌ಮೆಂಟ್ ಕೋರ್ಸ್ ಮುಗಿಯುತ್ತಾ ಬರುತ್ತಿದ್ದು, ಇವೆಂಟ್‌ಗಳನ್ನು ಮಾಡುತ್ತಿದ್ದೇನೆ. ನಟನೆ ಜೊತೆಗೆ ಅದು ಕೂಡ ನನ್ನ ಪ್ರಮುಖ ಪ್ಯಾಷನ್. ■



# ಕಾಸರವಳ್ಳಿ: ಸಂತಸ ಯುಗಳ

ಕನ್ನಡ ವಾಕ್ಚಿತ್ರ ಪರಂಪರೆಗೆ ತೊಂಬತ್ತು ವರ್ಷಗಳು ತುಂಬಿರುವ ಮಾರ್ಚ್ ತಿಂಗಳು ಹಿರಿಯ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರ ಪಾಲಿಗೆ ಸಂತೋಷ ಯುಗಳದ ಸಮಯ. ಆ ವಿಶೇಷ ಸಂಗತಿಗಳೆಂದರೆ: 'ಘಟಶ್ರಾದ್ಧ' ಸಿನಿಮಾದ ಪ್ರಿಂಟ್ ಉನ್ನತೀಕರಣಗೊಳ್ಳುತ್ತಿರುವುದು ಹಾಗೂ ಗಿರೀಶರ ಸಿನಿಮಾಗಳ ಕುರಿತ ಪುಸ್ತಕ ಬಿಡುಗಡೆಯಾಗುತ್ತಿರುವುದು.

ಗಿರೀಶರ ನಿರ್ದೇಶನದ ಚೊಚ್ಚಿಲ ಸಿನಿಮಾ 'ಘಟಶ್ರಾದ್ಧ' (1978) ಹಲವು ಹಿರಿಮೆಗಳ ಪ್ರಯೋಗ. ಯು.ಆರ್. ಅನಂತಮೂರ್ತಿಯವರ ಕಥೆ ಆಧರಿಸಿದ ಈ ಚಿತ್ರ ಕನ್ನಡ ಚಿತ್ರರಂಗಕ್ಕೆ ಮೂರನೇ 'ಸ್ವರ್ಣಕಮಲ' ದೊರಕಿಸಿ ಕೊಟ್ಟ ಕಲಾಕೃತಿ. ಕನ್ನಡ ಸಿನಿಮಾರಂಗದ ತೊಂಬತ್ತು ವರ್ಷಗಳ ಇತಿಹಾಸದಲ್ಲಿ ಕನ್ನಡದ ಆರು ಚಿತ್ರಗಳಿಗೆ ರಾಷ್ಟ್ರಪತಿಗಳ 'ಸ್ವರ್ಣಕಮಲ' ಲಭ್ಯವಾಗಿದ್ದು, ಅವುಗಳಲ್ಲಿ ನಾಲ್ಕು ಕಾಸರವಳ್ಳಿ ನಿರ್ದೇಶನದ ಚಿತ್ರಗಳೇ ಆಗಿವೆ. ಆ ಸರಣಿಯಲ್ಲಿ ಮೊದಲ ಸಿನಿಮಾ 'ಘಟಶ್ರಾದ್ಧ'.

ಭಾರತೀಯ ಸಿನಿಮಾದ ಶತಮಾನೋತ್ಸವ ಸಂದರ್ಭ, ಶತಮಾನದ 20 ಶ್ರೇಷ್ಠ ಚಿತ್ರಗಳಲ್ಲಿ ಒಂದೆಂದು ಪರಿಗಣಿತವಾದ ಈ ಚಿತ್ರ ಅನೇಕ ಅಂತರರಾಷ್ಟ್ರೀಯ ಮನ್ನಣೆಗಳಿಗೂ ಪಾತ್ರವಾಗಿತ್ತು. ಇದೀಗ 'ಘಟಶ್ರಾದ್ಧ'ಕ್ಕೆ ಹೊಸಬೆಳಕಿನ ಅವಕಾಶ.

ಹಾಲಿವುಡ್ ಚಿತ್ರರಂಗದ ಮಾರ್ಟಿನ್ ಸ್ಕಾರ್ಸೆಸಿ ಅವರ ಸಿನಿಮಾ ಫೌಂಡೇಷನ್ ಮತ್ತು ಶಿವೇಂದ್ರ ಸಿಂಗ್ ಅವರ ಫಿಲ್ಮ್ ಹೆರಿಟೇಜ್ ಫೌಂಡೇಷನ್ ಜಂಟಿಯಾಗಿ ಕೈಗೆತ್ತಿಕೊಂಡಿರುವ ಈ ಪ್ರಾಜೆಕ್ಟ್‌ಗೆ ಹಾಲಿವುಡ್ ನಿರ್ದೇಶಕ ಜಾರ್ಜ್ ಲ್ಯೂಕಾಸ್ ಅವರ ಹಾಬ್ಸನ್–ಲ್ಯೂಕಾಸ್ ಫೌಂಡೇಷನ್ ಕೂಡ ಕೈಜೋಡಿಸಿದೆ.

ಜಾಗತಿಕ ಸಿನಿಮಾರಂಗದಲ್ಲಿನ ಶ್ರೇಷ್ಠ ಚಿತ್ರಗಳನ್ನು ಗುರ್ತಿಸಿ, ಅವುಗಳನ್ನು ತಾಂತ್ರಿಕವಾಗಿ ಉನ್ನತೀಕರಿಸುವುದು ಹಾಗೂ ಸಂರಕ್ಷಿಸುವುದು ಈ ಯೋಜನೆಯ ಉದ್ದೇಶ. ಈ ಯೋಜನೆಯಲ್ಲಿ ತೊಡಗಿರುವ ಮಾರ್ಟಿನ್ ಸ್ಕಾರ್ಸೆಸಿಯವರ ಸಿನಿಮಾ ಫೌಂಡೇಷನ್, ಭಾರತದಿಂದ ಆಯ್ಕೆ ಮಾಡಿರುವ ಮೂರನೇ ಚಿತ್ರ 'ಘಟಶ್ರಾದ್ಧ'. ಅರವಿಂದನ್ ನಿರ್ದೇಶನದ ಮಲೆಯಾಳಂ ಚಿತ್ರ 'ತಂಪ್' ಹಾಗೂ ಅರಿಭಾಮ್ ಶ್ಯಾಂ ಶರ್ಮ ಅವರ ಮಣಿಪುರಿ ಭಾಷೆಯ 'ಇಶಾನು' ಉಳಿದೆರಡು ಸಿನಿಮಾಗಳು.

ಗಿರೀಶ ಕಾಸರವಳ್ಳಿಯವರು ತಾವು ಬಳಸಿದ ಚಿತ್ರ ಸಾಮಗ್ರಿಗಳನ್ನು ಫೌಂಡೇಷನ್‌ಗೆ ನೀಡಿದ್ದು, ಸಂಸ್ಥೆಯು, ಸಿನಿಮಾದ ಪ್ರತಿ ಅಂಶವನ್ನು ಎಚ್ಚರದಿಂದ ಸಂರಕ್ಷಿಸುವ ಹೊಣೆ ಹೊತ್ತಿದೆ. ಸುಮಾರು 8 ತಿಂಗಳ ಕಾಲ ಈ ಸಿನಿಮಾ ಉನ್ನತೀಕರಣದ ಕಾರ್ಯ ನಡೆಯಲಿದೆ.

'ಘಟಶ್ರಾದ್ಧ'ದ ಉನ್ನತೀಕರಣದ ಸುದ್ದಿಯ ಜೊತೆಗೆ ಕಾಸರವಳ್ಳಿಯವರ ಹೊಸ ಪುಸ್ತಕದ ಸಮಾಚಾರ ಪ್ರಕಟಗೊಂಡಿದೆ. ಗಿರೀಶರು ತಮ್ಮ ಸಿನಿಮಾಗಳನ್ನು ನಿರ್ದೇಶಕನ ಕಣ್ಣೋಟದಲ್ಲಿ ವಿವರಿಸುವ ಪ್ರಶ್ನೋತ್ತರ ಮಾದರಿಯ ಈ ಪುಸ್ತಕ ಮಾರ್ಚ್ 17ರಂದು ಬಿಡುಗಡೆಯಾಗಲಿದೆ. ತಮ್ಮ ಎಲ್ಲ ಸಿನಿಮಾಗಳಿಗೆ ಸಂಬಂಧಿಸಿದಂತೆ, ಬಿಂಬಗಳ ವ್ಯಾಕರಣದ ಕುರಿತು ಗಿರೀಶರು ಪುಸ್ತಕದಲ್ಲಿ ಚರ್ಚಿಸಿದ್ದಾರೆ. ಸಿನಿಮಾ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಇಂಥ ಪುಸ್ತಕ ಭಾರತದಲ್ಲಿ ಇದೇ ಮೊದಲ ಬಾರಿಗೆ ಪ್ರಕಟಗೊಳ್ಳುತ್ತಿದೆ. ■